# ಅವಳು ಪ್ರಕೃತಿ, ನಾನು ಪುರುಷ ನಾಟ್ಯ ನಮ್ಮ ಗುರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಅಂದಿನ ಆಂಧ್ರಪ್ರದೇಶಕ್ಕೆ ಸೇರಿದ ನರಸಪುರಂ ಎಂಬ ಹಳ್ಳಿಯಲ್ಲಿ ಹುಟ್ಟಿದ ರಾಜಾ ರೆಡ್ಡಿ ಹಾಗೂ ಕೊಟಲಗಾಂವ್ ಎಂಬಲ್ಲಿ ಹುಟ್ಟಿದ ರಾಧಾ ದಾಂಪತ್ಯಕ್ಕೆ ಕಾಲಿಟ್ಟಾಗ, ಮುಂದೊಂದು ದಿನ ತಾವಿಬ್ಬರೂ ಕೂಚಿಪುಡಿ ನೃತ್ಯ ಕ್ಷೇತ್ರದ ಪ್ರಸಿದ್ಧ ಕಲಾವಿದ ದಂಪತಿಯಾಗಿ ಮೆರೆಯುತ್ತೇವೆ ಎಂಬ ಕನಸು ಕಂಡಿರಲಿಲ್ಲ. ಯಾಕೆಂದರೆ, ಮದುವೆಯಾದಾಗ ರಾಧಾ ಐದು ವರ್ಷದ ಹುಡುಗಿಯಾಗಿದ್ದರೆ, ರಾಜಾ 11 ವರ್ಷದ ಹಳ್ಳಿಹೈದ. ಬಾಲ್ಯದಲ್ಲಿ ಭಾಗವತ ಮೇಳ, ನಾಟಕಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ರಾಜಾರೆಡ್ಡಿ, ಊರಿಗೆ ಬಂದ ಮೇಳಗಳೊಡನೆಯೇ ಹೋಗಿಬಿಡುತ್ತಿದ್ದರು. ತಾನೂ ನೃತ್ಯ ಕಲಿಯಬೇಕು ಎಂದು ಹವಣಿಸಿದರು. ಆದರೆ ಕೂಚಿಪುಡಿ ನೃತ್ಯ ಕಲಿಸಲು ಗುರುಗಳು ನಿರಾಕರಿಸಿದಾಗ ನೊಂದುಕೊಂಡರು. ದುಡಿಮೆಯಿಲ್ಲದ ಅಲೆಮಾರಿ ಹುಡುಗನೆಂದು ಮನೆಯವರು ಜರೆದರು. ಆದರೆ, ನೃತ್ಯದ ಬೆಂಬತ್ತಿಹೋದ ರಾಜಾ ರೆಡ್ಡಿಯವರನ್ನು ಪತ್ನಿ ರಾಧಾ ಅನುಸರಿಸಿದರು. ಬದುಕಿನಲ್ಲಿಯೂ, ವೇದಿಕೆಯಲ್ಲಿಯೂ ಪತಿಯ ಹೆಜ್ಜೆಯೊಡನೆ ಹೆಜ್ಜೆ ಹಾಕುತ್ತಾ ಸಾಗಿದರು. ಇಬ್ಬರ ಹುಡುಕಾಟ, ಶ್ರಮ ವ್ಯರ್ಥವಾಗಲಿಲ್ಲ. ಆಂಧ್ರಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾಗಿದ್ದ ಕೂಚಿಪುಡಿ ನೃತ್ಯವನ್ನು ಔಪಚಾರಿಕ ವೇದಿಕೆಯಲ್ಲಿ ಪ್ರದರ್ಶಿಸಲು ಬೇಕಾದ ಕೌಶಲಗಳನ್ನು ಇಬ್ಬರೂ ಸೇರಿ ಕಲಿತು, ಅನ್ವಯಿಸಿದರು. ತೆಲುಗುನಾಡಿನಲ್ಲಿ ನಿತ್ಯಧ್ವನಿಯಾಗಿದ್ದ ಕೂಚಿಪುಡಿ ಗೆಜ್ಜೆನಾದವು ರಾಷ್ಟ್ರ ರಾಜಧಾನಿಯಲ್ಲಿ ಅನುರಣಿಸುವಂತೆ ಮಾಡಿದ ದಂಪತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅಂತರರಾಷ್ಟ್ರೀಯ ಕಲಾ ಉತ್ಸವಗಳಲ್ಲಿ, ಇತರ ದೇಶಗಳ ಕಲಾಪ್ರದರ್ಶನಗಳಿಗೆ ಸರಿಮಿಗಿಲೆಂಬಂತೆ ಕೂಚಿಪುಡಿ ನೃತ್ಯ ಪ್ರಕಾರವನ್ನು ಪ್ರಸ್ತುತಪಡಿಸಿ ಪ್ರಚುರಗೊಳಿಸಿದರು. ಅವರ ಪ್ರಯತ್ನಗಳು ಕೂಚಿಪುಡಿ ನೃತ್ಯಕ್ಕೆ ಹೊಸ ಆಯಾಮ ನೀಡಿದವು. ಭಾರತ ಸರ್ಕಾರ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ನೀಡಿ ಈ ಅನುಪಮ ಜೋಡಿಯ ಕಲಾಸೇವೆಯನ್ನು ಗೌರವಿಸಿದೆ. 'ಮಯೂರ'ದ 'ಲಲಿತ ಮಂಟಪದ' ಭಾಗವಾಗಿ, ರಾಜಾ ರಾಧಾ ರೆಡ್ಡಿ ಅವರೊಡನೆ ನಡೆಸಿದ ಮಾತುಕತೆಯ ಆಯ್ದ ಭಾಗಗಳು ಇಲ್ಲಿವೆ.

◆ **ನಿಮ್ಮ ಹೆಸರನ್ನು 'ರಾಜಾ ರಾಧಾ ರೆಡ್ಡಿ' ಎಂದೇ ಬರೆಯಬೇಕೆಂದು ನೀವು ಹೇಳುತ್ತೀರಿ. ಇದರ ಹಿಂದೆ ಕಾರಣವೇನಾದರೂ ಇದೆಯೇ ?**

ಕೂಚಿಪುಡಿ ಕಲಿಕೆಯ ಈ ದೀರ್ಘ ಪ್ರಯಾಣದಲ್ಲಿ